ಸಿ.ಸಿ.1617/2023 ಪಿಡಬ್ಲ್ಯೂ-1

ದಿನಾಂಕಃ 24.09.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ</u>**

ದಾರದಹಳ್ಳಿ ಮತ್ತು ಕಡಿದಾಳು ಬೇರೆ ಬೇರೆ ಊರು ಎಂದರೆ ಸರಿ. ಜಿ.ಹೊಸಹಳ್ಳಿ ಗ್ರಾಮದಿಂದ ಕಡಿದಾಳು ಗ್ರಾಮಕ್ಕೆ ಸುಮಾರು 35 ಕಿ.ಮೀ ಇದೆ. ಅದೇ ರೀತಿ ಜಿ. ಹೊಸಹಳ್ಳಿ ಗ್ರಾಮದಿಂದ ದಾರದಹಳ್ಳಿ ಗ್ರಾಮಕ್ಕೆ ಅಂದಾಜು 20 ಕಿ.ಮೀ ಇರಬಹುದು. ನನ್ನ ನೋಟಿಸು ಹಾಗೂ ದೂರಿನಲ್ಲಿ ನನ್ನ ವೃತ್ತಿ ಹಾಗೂ ಆರೋಪಿಯ ವೃತ್ತಿಯ ಬಗ್ಗೆ ಹೇಳಿ ಬರೆಸಿಲ್ಲ ಎಂದರೆ ಸರಿ. ಆರೋಪಿ ನನಗೆ 4-5 ವರ್ಷಗಳಿಂದ ಪರಿಚಯ. ಈ ಅವದಿಯ ಒಳಗೆ ನನ್ನ ಹಾಗೂ ಆರೋಪಿಯ ನಡುವೆ ಅನೇಕ ಬಾರಿ ಹಣದ ವ್ಯವಹಾರಗಳಾಗಿದ್ದು ಎಷ್ಟೆಷ್ಟು ಹಣ ಎಂದು ಹೇಳಲು ಆಗುವುದಿಲ್ಲ. ಆ ವ್ಯವಹಾರಗಳ ಬಾಬ್ತು ನಾನು ಆರೋಪಿಯಿಂದ ಯಾವುದೇ ದಾಖಲೆ ಪಡೆದಿಲ್ಲ. ಆ ಎಲ್ಲಾ ವ್ಯವಹಾರಗಳು ಬ್ಯಾಂಕಿನ ಮೂಲಕ ನಡೆದಿಲ್ಲ. ನಾನು ಬೇರೆಯವರೊಂದಿಗೂ ಸಹ ಹಣದ ವ್ಯವಹಾರ ಮಾಡಿದ್ದೇನೆ. ನಾನು ಸಾಲ ಕೊಡುವಂತ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಯಾರಿಗಾದರೂ ಹಣ ಕೊಟ್ಟರೇ ಅವರಿಂದ ಬಡ್ಡಿ ಕೊಡುವುದಿಲ್ಲ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.